ಆಡಿ ಬಿಸಾಕಿದ ಬಲೂನಾಗಿರಬಹುದು, ರಬ್ಬರ್ ಬ್ಯಾಂಡ್ ಆಗಿರಬಹುದು. ಆದರೆ ಅದು ಆ ಸಮಯಕ್ಕೆ ಹಲ್ಲಿ!

ಅಯ್ಯೋ, ವಿಷಯಕ್ಕೆ ಬನ್ರಿ ಅಂತೀರೇನೋ. ಮನೇಲೂ ಹಾಗೆ ಆಗೋದು. ಪಡಸಾಲೆಯಲ್ಲಿ ಎಲ್ಲರೂ ಸೇರಿ ಸಭೆ ಮಾಡಿ ನನ್ನ ವಿರುದ್ಧ ಠರಾವು ಹೊರಡಿಸ್ತಾರೆ. 'ಸಾಕು ಸಾಕು ನಿಮ್ಮ ಹಲ್ಲೀ ಪುರಾಣ. ಮೊದಲು ಅವನ್ನ ಹೊರಕ್ಕೆ ಹಾಕಿ, ಇಲ್ಲದಿದ್ದರೆ...' ಅಂತ ನನ್ನ ಮತಕ್ಕೆ ಕಾಯದೆ ಸುಗ್ರೀವಾಜ್ಞೆ ಹೊರಡಿಸೋದು ಸಾಮಾನ್ಯ. (ಅದೊಂಥರಾ ದಿನಚರಿ. ಅಲ್ಲ ಸಂಜೆಚರಿ!). ಆಗ ಶುರುವಾಗುತ್ತೆ ಹಲ್ಲಿ ಬೇಟೆ!

ಈ ಹಲ್ಲಿಗಳೂ ಒಂಥರಾ ಹುಲಿ ತರಾನೇ. ಹುಲಿಗಳು ಕಾಡಲ್ಲಿ ತಾವೆಲ್ಲೆಲ್ಲಿ ಓಡಾಡಿದೆವು ಅನ್ನೋದಕ್ಕೆ ಹೆಜ್ಜೆ ಗುರುತು ಹಾಕಿ, ತಮ್ಮ ಏರಿಯಾ ಗುರುತಿಸೋದಕ್ಕೆ ಅಲ್ಲಲ್ಲಿ ಮೂತ್ರ ಸಿಂಪಡಿಸಿ ಹೋಗಿರುತ್ತವಂತೆ. ಅದೇ ತರಹ ಈ ಹಲ್ಲಿಗಳೂ ಕೂಡ, 'ತಾವು ಇಲ್ಲೆಲ್ಲಾ ಬಂದಿದ್ದೆವು, ತಾಕತ್ತಿದ್ದರೆ ಹುಡುಕಿ ಹಿಡಿಯಿರಿ' ಅಂತ ಹೇಳೋದಕ್ಕೆ ಅಲ್ಲಲ್ಲಿ ಹಿಕ್ಕೆ ಹಾಕಿ ಹೋಗಿರುತ್ವೆ. ಕರಿ ಹಿಕ್ಕೆಯ ತುದಿಯಲ್ಲೊಂದು ಬಿಳಿಯ ನತ್ತು! ಖಂಡಿತಾ ನೋಡಲಿಕ್ಕೆ ಸುಂದರವಾಗಿರುತ್ತೆ. ಅವುಗಳ ಜಾಡು ಹಿಡಿದು ಹುಡುಕಿ ಹಿಡಿಯುವುದೇ ನನ್ನ ಕರ್ಮ. ಅಂದರೆ ಕೆಲಸ! ಏನೇನೋ ಅಂದುಕೊಂಡು ಹಲ್ಲಿಗಳಿಗೆ ಅವಮಾನವಾಗುವುದು ಬೇಡ.

ಈ ಹಲ್ಲಿಗಳೇನು ಸಾಮಾನ್ಯವೇ, ನಮ್ಮ ಮನೆಯಲ್ಲೇ ನನಗೇ ಸವಾಲು ಹಾಕುತ್ತವೆ. ಎಲ್ಲೋ ಕೆಲವು ಹಲ್ಲಿಗಳು ಮಾತ್ರ ಇದ್ದಲ್ಲಿಯೇ ಇದ್ದು ಮರ್ಯಾದೆ ಮೀರದೆ ಹೇಳಿದಂತೆ ಕೇಳಿಕೊಂಡು ಹೊರಗೆ ಹೋಗುತ್ತವೆ. ಬಹುತೇಕ ಹಲ್ಲಿಗಳು ಬಹಳ ಕಿಲಾಡಿಗಳು. ಅವುಗಳ ಹತ್ತಿರ ಹೋಗುತ್ತಿದ್ದಂತೆಯೇ ಸಿಕ್ಕೇಬಿಡುವುದು ಗ್ಯಾರಂಟಿ ಎಂದಾದರೆ, ಇಂತದೆಲ್ಲಾ ಅಭ್ಯಾಸವಾಗಿರುವ ಹಲ್ಲಿಗಳು ಬಾಲ ಬಿಸಾಕಿ ಎಲ್ಲೋ ಪರಾರಿ. ಬಾಲ ಬಿತ್ತೋ ಮಕ್ಕಳೆಲ್ಲಾ ಕೋರಸ್ಸಿನಲ್ಲಿ ಕೂಗಿ ಓಟ. ಈ ಹಲ್ಲಿಗಳು ಅದೆಲ್ಲಿ ಬಚ್ಚಿಟ್ಟುಕೊಳ್ಳುತ್ತವೋ ಗುರುತಿಸುವುದು ಮಹಾ ಕಷ್ಟ. ಕೆಲವು ಪಳಗಿದ ಹಲ್ಲಿಗಳು ಯಾವುದಾದರೂ ಕತ್ತಲ ಮೂಲೆಯಲ್ಲಿ ಗೋಡೆಗೆ ಹೇಗೆ ಅಂಟಿಕೊಂಡು ಇರುತ್ತವೆಂದರೆ, ಬ್ಯಾಟರಿ ಟಾರ್ಚ್ ದೀಪ ಹಾಕಿ ಹುಡುಕಿದರೂ ಕೆಲವೊಮ್ಮೆ ಪತ್ತೆಯಾಗುವುದಿಲ್ಲ. ಅವುಗಳಿಗೂ ಇರುವ ಜಾಗದ ಬಣ್ಣ ಬದಲಿಸಿಕೊಳ್ಳುವ ತಮ್ಮದೇ ಬಂಧು ಊಸರವಳ್ಳಿ ಬುದ್ಧಿ ಇದೆಯೇನೋ? ಹಲ್ಲಿಗಳ ಬಾಲ ಬಿಚ್ಚಿ ಬಿಸಾಕಿ ಓಡೋ ವಿದ್ಯೆ ನಮಗೂ ಸ್ವಲ್ಪ ಸಿದ್ಧಿಸಿದ್ದರೆ ಒಳ್ಳೆಯದಾಗುತ್ತಿತ್ತು. ಬೇಕಾದಾಗ ಬೇಡವಾದಾಗ ಕೈಯಿ, ಕಾಲು, ಮುಖ, ಬಾಲ ಕಳಚಿಟ್ಟು ಓಡಬಹುದಿತ್ತು!

ಹಲ್ಲಿ ಬೇಟೆಗೆ ಸಾಧನ ಸಲಕರಣೆಗಳ ಬಳಕೆಯಲ್ಲಿ ಹಂತಹಂತವಾಗಿ ವಿಕಾಸವಾಗಿದೆ. ಮೊದಮೊದಲು ಪೊರಕೆ, ಕಸದ ಮೊರ ಬಳಕೆಯಲ್ಲಿತ್ತು. ಆದರೆ, ಕೆಲವು ಬಾರಿ ಹಲ್ಲಿ ಹತ್ಯೆಯಾಗುತ್ತಿತ್ತು (ಅವುಗಳ ಆತ್ಮಕ್ಕೆ ನಮ್ಮ ಗೌರವವಿರಲಿ) ಅಥವಾ ಹಲ್ಲಿಗಳು ಮೊರದಿಂದ ಜಿಗಿದೋಡುತ್ತಿದ್ದವು. ನನ್ನ ಕೈಕಾಲ ಮೇಲೆ ಜಾಗಿಂಗ್ ಕೂಡಾ! ಹೀಗಾಗಿ ಬೇಟೆಯಲ್ಲಿ ಹಲವಾರು ಸುಧಾರಣೆಗಳು ಬಂದಿವೆ. ಪೊರಕೆ ಮತ್ತು ಪ್ಲಾಸ್ಟಿಕ್ ಕವರ್ ತಂತ್ರಜ್ಞಾನ ಬಂತು. ಅದು, ಹಲ್ಲಿಯನ್ನು ಕವರ್ ಒಳಗೆ ಹೋಗಲು ಪೊರಕೆಯಿಂದ ಪುಸಲಾಯಿಸುವುದು. ಅವು ನೇರವಾಗಿ ತಾವೇ ತಾವಾಗಿ ಹೋದರೆ ಸರಿ, ಇಲ್ಲದಿದ್ದರೆ ಬಲವಂತವಾಗಿ ಹೋಗಿಸುವುದು. ಈಗ ಪೂರ್ತಿ ಸುಧಾರಿತ ತಂತ್ರ ಸಿದ್ಧಿಸಿದೆ. ಏನಿಲ್ಲ, ಪ್ಲಾಸ್ಟಿಕ್ ಕವರ್ ಅನ್ನು ಕೈಗೆ ಗವಸಿನಂತೆ ಹಾಕ್ಕೊಳ್ಳೋದು, ನಾವೂ ಹಲ್ಲಿಯ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಂಡು ಅದರಷ್ಟೇ ಚುರುಕಾಗಿದ್ದು ಒಂದೇ ಏಟಿಗೆ ಲಬಕ್ ಅಂತ ಹಲ್ಲಿಯನ್ನ ಹಿಡಿದು, ಕವರ್ ಒಳಗೆ ಬಂಧಿಸಿ ಹೋಗಿಬಾಪ್ಪಾ ಅಥವಾ ಹೋಗಿಬಾಮ್ಮಾ ಅಂತ ಹೊರಗೆ ಬಟಾಬಯಲಿನಲ್ಲಿ ಕವರ್ ಸಮೇತ ಕಳುಹಿಸೋದು. ಇದಕ್ಕೆ ನಮ್ಮಮ್ಮ ಮತ್ತು ಹೆಂಡತಿಯಿಂದ ಭಿನ್ನಾಭಿಪ್ರಾಯವಿದೆ, 'ಅದೇನದು ಹೋಗಿ ಬಾಪ್ಪಾ, ಹೋಗಿ ಬಾಮ್ಮಾ ಅನ್ನೋದು. ಅದು ಯಾಕೆ ವಾಪಸ್ಸು ಬರಬೇಕು ಮತ್ತು ಅದೇ ವಾಪಸ್ ಬರುತ್ತೇಂತ ನಿನಗೇನು ಖಾತರಿ. ಅಷ್ಟಕ್ಕೂ ಬಾ ಬಾ ಅಂತಾ ಅದನ್ನೇನು ಕರೆಯೋದು. ಪಂಜೆ ಮಂಜೇಶರಾಯರು 'ಕೈಗಳ ಮುಗಿವೆ ಹಾಲನ್ನೀವೆ ಪೋಪೋ ಪೋಪೋ ಪೋಪೋ!' ಅಂತ ನಾಗರಹಾವನ್ನ ಕಳಿಸಿದ ಹಾಗೆ ನೀವೂನು 'ಹಲ್ಲಿ ಹೋಗೋಗೋಗೋಗೋಗೋಗು ಅಂತ ಅನ್ನಲೇಬೇಕು' ಅಂತ ಒತ್ತಾಯ ಮಾಡ್ತಾರೆ.



ಈ ಹಲ್ಲಿ ಕೈಕವರ್ ಹೊಸ ವಿಧಾನದಲ್ಲಿ ಹಲ್ಲಿ ಬೇಟೆಯಲ್ಲಿ ಮೊದಲಿದ್ದಂತಹ ಮಜಾ ಇಲ್ಲ. ಎಲ್ಲವೂ ಕೆಲವು ಕ್ಷಣಗಳಲ್ಲಿ ಮುಗಿದುಹೋಗುತ್ತೆ. ಬೇಟೆಗೆಂದು ಕತ್ತಿ ಕೋವಿ ಹಿಡಿದುಕೊಂಡು, ಕ್ಷಮಿಸಿ, ಪೊರಕೆ, ಕಸದ ಮೊರ ಹಿಡಿದುಕೊಂಡು ನೇರಾನೇರ ಮುಖಾಮುಖಿ ಆಗುವಾಗ ಹಲ್ಲಿಗಳು ದೊಡ್ಡವಿರಲಿ ಚಿಕ್ಕವಿರಲಿ, ಕಪ್ಪಗಿರಲಿ, ಬೆಳ್ಳಗಿರಲಿ... ಅವು ಆ ಕಡೆ ಓಡೋದು, ನಾವು ಈ ಕಡೆ ಸೋಫಾ ಎಳೆಯೋದು, ಪರದೆ ಕೀಳೋದು, ಗೋಡೆಗಳ ಮೇಲಿನ ಫೋಟೊ ಅಲುಗಿಸೋದು, ಪುಸ್ತಕಗಳನ್ನ ಸರಿಸೋದು, ಪಾತ್ರೆ ಬೀಳಿಸೋದು, ಶೋಕೇಸಿನ ಗಾಜಿನ ಬೊಂಬೆ ಒಡೆಯೋದೂ ಏನೂ ಆಗಲ್ಲ. ಏನೇ ಆದ್ರೂ ಕವರಾಸ್ತ್ರದಲ್ಲಿ ಪ್ರಾಣಿಹಿಂಸೆ 'ಇಲ್ಲ' ಅನ್ನೋದು ನಮ್ಮ ನಂಬಿಕೆ. ಜೊತೆಗೆ ತುಂಬಾ ಧೈರ್ಯವೂ ಬಂದುಬಿಟ್ಟಿದೆ. ಈ ನಡುವೆ ಮನೆ ಮಕ್ಕಳೂ ಕೂಡಾ ಕವರಾಪರೇಷನ್ ಸ್ವಂತವಾಗಿ ಯಾವುದೇ ವಯಸ್ಕರ ಉಸ್ತುವಾರಿ ಇಲ್ಲದೇ ಮಾಡಲು ಮುಂದಾಗಿಬಿಟ್ಟಿದ್ದಾರೆ.

ಇಂತಹ ನಿತ್ಯದ ಹಲ್ಲಿ ಬೇಟೆ, ಒಂದ್ಸರ್ತಿ ನಮ್ಮ ದೊಡ್ಡಮ್ಮ ಮನೆಗೆ ಬಂದಾಗ ಘಟಿಸಿತು. ನಮ್ಮ ಸೋದರ ಮಾವನ ಮಗಳಿಗೊಂದು ಗಂಡು ಗೊತ್ತಾಗುವ ಮಾತು ಆಡ್ತಿದ್ದಾಗ ಎಲ್ಲೋ ಕೂತಿದ್ದ ಯಾವುದೋ ಹಲ್ಲಿ 'ಲೊಚ ಲೊಚ' ಅಂದ್ಬಿಡ್ತು. ದೊಡ್ಡಮ್ಮನ ಮುಖ ನೂರು ಕ್ಯಾಂಡಲ್ ಬಲ್ಬ್ ತರಹ ಆಗ್ಬಿಡ್ತು. ಮದುವೆ ಗ್ಯಾರಂಟಿ ಮಾಡಿದ ಹಲ್ಲಿಗೆ ಅವ್ರು ಹಾಡಿ ಹಾಡಿ ಹರಸಿದರು. ಆದರೆ ಅದೇ ಆ ಕರಿ ಹಲ್ಲೀನೇ ಇರಬೇಕು, ಅಡುಗೆ ಮನೆಯಲ್ಲಿ ಪಾಪ ರಾತ್ರಿ ಊಟ ಹುಡುಕ್ತಿದ್ದಾಗ ನನ್ನ ಹೆಂಡತಿ ಕಣ್ಣಿಗೆ ಬಿದ್ದು ಹಾಳು ಹಲ್ಲಿಯಾಗಿಹೋಯ್ತು! ನಾನು ಮಾಮೂಲಿಯಂತೆ ಹಲ್ಲಿ ಬೇಟೆಗಾರ.

ನಾನು ತೋರಿಸಿದ ಕವರ್‌ನಲ್ಲಿ ಮರ್ಯಾದೆಯಿಂದ ಪ್ರವೇಶಿಸುವ ಬದಲು ತಟಕ್ ಅಂತ ಹಾರಿ ನನ್ನ ಕೈಮೇಲೆ ಅದು ಓಡಾಡಿಬಿಟ್ಟಿತ್ತು. ಅದೇನೋ ತನ್ನ ಆತ್ಮರಕ್ಷಣೆಗಾಗಿ ಕೈಮೇಲೆ ಮೂತ್ರವಿಸರ್ಜನೆಯಿನ್ನೂ ಮಾಡಿರಲಿಲ್ಲ (ಹಾಗೆ ಮಾಡಿದರೆ ತಕ್ಷಣ ತೊಳೆದುಕೊಳ್ಳಬೇಕು ಅನ್ನೋದು ಗೊತ್ತಿದೆ). ನಮ್ಮ ಮನೆಯವರಿಗೆಲ್ಲಾ ಇದೊಂದು ಪ್ರತಿದಿನದ ಸಿಂಪಲ್ ಆಪರೇಷನ್. ಹಲ್ಲಿ ಕೈಮೇಲೆ ಕಾಲ್ಮೇಲೆ ಬರೋದು ಮಾಮೂಲಿ. ದೊಡ್ಡಮ್ಮ ಗರಬಡಿದು ಹೋದರು, 'ಹಲ್ಲಿ ಕೈ ಮೇಲೆ ಬರೋದು ಅಂದ್ರೇನು? ತಲೆಗೆ ನೀರು ಹಾಕಿಕೊಂಡು ಸ್ನಾನ ಮಾಡಿ ದೇವರಿಗೆ ದೀಪ ಹಚ್ಚು. ಬೆಳ್ಳಿ ಹಲ್ಲಿ, ಬೆಳ್ಳಿ ಕೈ ದಾನ ಮಾಡ್ಬೇಕು (ಸದ್ಯ ಚಿನ್ನದ್ದು ಅನ್ನಲಿಲ್ಲವಲ್ಲ). ತಕ್ಷಣವೇ ಕಂಚಿಗೆ ಹೋಗಿ ಹಲ್ಲಿ ಸ್ಪರ್ಶ ಮಾಡಿಬರಬೇಕು, ಶಾಂತಿ ಮಾಡಿಸ್ಬೇಕು.' ಇನ್ನೂ ಒಂದೆರೆಡು ಮೂರು ವಿಧಿವಿಧಾನಗಳಿದ್ದವು. ಹಲ್ಲಿ ಬೇಟೆಯ ನಿತ್ಯ ಕತೆಯನ್ನ ಅಮ್ಮ ನಿಧಾನವಾಗಿ ದೊಡ್ಡಮ್ಮನಿಗೆ ಹೇಳಿದ್ರು. ಸ್ನಾನ, ದೀಪ, ಕಂಚಿ, ದಾನ ಅಂತಿದ್ರೆ, ವಾರಕ್ಕೆ ಆರು ಸರ್ತಿ ಮಾಡ್ಬೇಕಷ್ಟೆ (ಯಾಕೋ ಗೊತ್ತಿಲ್ಲ ಭಾನುವಾರ ಸೇರಿಸಲಿಲ್ಲ. ರಜಾ ಇರಬೇಕು!). ಇದ್ದ ಮೂರು ದಿನ ದೊಡ್ಡಮ್ಮ ದಿನನಿತ್ಯದ 'ಹಲ್ಲಿ ಬೇಟೆ' ನೋಡಿ, 'ಕಂಚಿಗಿಂಚಿ ಬೇಡ, ನಿನ್ನೇ ಮುಟ್ಟಿಬಿಡೋಣ' ಅಂತ ನನಗೇ ಸರ್ಟಿಫಿಕೇಟ್ ಕೊಟ್ಟುಬಿಟ್ಟರು.

ನಿಮ್ಮ ಮನೇಲೂ ಹಲ್ಲಿ ಕೂಟ ಇದ್ದರೆ ಹೇಳಿ, ಅಸ್ತ್ರ ಶಸ್ತ್ರಸಜ್ಜಿತರಾಗಿ ಬಂದು ಹಲ್ಲಿ ಭೇಟಿ ಮಾಡಿ ಬೇಟೆ ಆಡೋಣ, ಅಷ್ಟೇ ಅಲ್ಲ ನಿಮಗೂ ಸುರಕ್ಷಿತ ಹಲ್ಲಿ ಬೇಟೆ ವಿದ್ಯೆ ಹೇಳ್ಕೊಡೋಣ.

ಪ್ರತಿಕ್ರಿಯಿಸಿ: feedback@sudha.co.in